**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 04.08.2026:**

**ಪಾಟೀಸವಾಲುಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಆರೋಪಿತರು ನನ್ನ ಹೆಂಡತಿಯ ಅಕ್ಕನ ಮಗ. ನಾನು ಬ್ಯಾಂಕ್ ಮ್ಯಾನೇಜರ್ ಆಗಿದ್ದೆನು. ನನಗೆ ಬ್ಯಾಂಕಿನಲ್ಲಿ ಖಾತೆ ಇರುತ್ತದೆ. ನನ್ನ ಹೆಣ್ಣುಮಕ್ಕಳ ಹೆಸರು ಮಧು, ಚೈತ್ರ ಮತ್ತು ಹೇಮರಾಣಿ. ಮಧು ಇಂಗ್ಲೇಂಡ್ ನಲ್ಲಿ ವೈದ್ಯ ವೃತ್ತಿ ಮಾಡುತ್ತಿದ್ದಾರೆ, ಅವಳ ಗಂಡ ಕೂಡ ವೈದ್ಯರು, ಅವರೂ ಅಲ್ಲೇ ಇದ್ದಾರೆ. 2004 ರಲ್ಲಿ ಅವರಿಗೆ ಮದುವೆ ಮಾಡಿರುತ್ತೇನೆ. ಚೈತ್ರ ಮತ್ತು ಅವಳ ಗಂಡ ಚೆನ್ನೈನಲ್ಲಿ ವೈದ್ಯ ವೃತ್ತಿ ಮಾಡುತ್ತಿದ್ದಾರೆ. ಹೇಮರಾಣಿ ಮತ್ತು ಅವಳ ಗಂಡ ಯು ಎಸ್ ಎ ಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರ ಹೆಸರುಗಳಲ್ಲಿ ಬ್ಯಾಂಕ್ ಖಾತೆ ಇರುತ್ತದೆ. ನನ್ನ ಹೆಂಡತಿ ಗೃಹಿಣಿ.

2.ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ 110-115 ಗ್ರಾಂ ಚಿನ್ನವನ್ನು ಯಾವಾಗ ಖರೀದಿಸಿದ್ದು ಎಂದರೆ ಸಾಕ್ಷಿಯು ನನ್ನ ಹೆಂಡತಿಗೆ ಆಕೆಯ ತವರುಮನೆಯಿಂದ ಉಡುಗೊರೆಯಾಗಿ ಕೊಟ್ಟಿರುವ ಚಿನ್ನ ಎನ್ನುತ್ತಾರೆ. ನನ್ನ ಹೆಂಡತಿ ನನ್ನ ಜೊತೆಯಲ್ಲೇ ಇದ್ದಾರೆ. ಆರೋಪಿತರು ಮತ್ತು ನಮ್ಮ ಮನೆ 4-5 ಮನೆಅಂತರದಲ್ಲಿ ಇರುತ್ತದೆ. ನಮ್ಮ ಚಿನ್ನವನ್ನು ನಾವು ಹೊಂದಿದ್ದ ಬ್ಯಾಂಕಿನ ಲಾಕರ್ ನಲ್ಲಿ ಇಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಅಲ್ಲಿ ಜಾಗ ಇರಲಿಲ್ಲ ಆ ಲಾಕರ್ ಚಿಕ್ಕದಿತ್ತು. ಇಂಗ್ಲೇಂಡ್ ನಲ್ಲಿರುವ ನನ್ನ ಮಗಳು 73 ಗ್ರಾಂ ಚಿನ್ನವನ್ನು 2013 ರಲ್ಲಿ ಖರೀದಿಸಿದ್ದು ಎನ್ನುವ ಬಗ್ಗೆ ರಶೀದಿ ಇರುತ್ತದೆ, ಅದನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ. ಆರೋಪಿತರ ಮನೆಯಲ್ಲಿ ನಾನು ಅಥವಾ ನನ್ನ ಮಕ್ಕಳು ಯಾವುದೇ ಚಿನ್ನವನ್ನು ಇಟ್ಟುಹೋಗಿಲ್ಲ ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಹೆಂಡತಿಯ ಅಕ್ಕನ ಮಗನಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸಲುವಾಗಿ ಸುಳ್ಳು ದಾಖಲೆ ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**